ಕನ್ನಡಪ್ರಭ

### ಜೈನ್ ವಿಶ್ವವಿದ್ಯಾಲಯದ 3ನೇ ಘಟಿಕೋತ್ಸವ

# ಪದವೀಧರರು ವೃತ್ತಿ ಜೀವನದ ಕಡೆ ಗಮನ ಹರಿಸಿ: ನಂದನ್ ನಿಲೇಕಣಿ

**ಬೆಂಗಳೂರು:** ಪದವಿ ಪಡೆದ ವಿದ್ಯಾರ್ಥಿಗಳು ಭವಿಷ್ಯ ಉತ್ತಮವಾಗಿರಲು ವೃತ್ತಿ ಜೀವನದ ಕಡೆ ಗಮನ ನೀಡಬೇಕು. ಇದು ಸಂತೋಷ ಮತ್ತು ಬದುಕಿಕೊಂದು ಅರ್ಥ ನೀಡುವ ದೊಡ್ಡ ಭಾಗ ಎಂಬುವುದನ್ನು ಮರೆಯದಿರಿ ಎಂದು ವಿಶಿಷ್ಟ ಗುರುತಿನ ಚೀಟಿ ಪ್ರಾಧಿಕಾರದ ಅಧ್ಯಕ್ಷ ನಂದನ್ ನಿಲೇಕಣಿ ಕಿವಿ ಮಾತು ಹೇಳಿದರು.

ಕನಕಪುರ ರಸ್ತೆಯಲ್ಲಿರುವ ಜೈನ್ ವಿಶ್ವವಿದ್ಯಾಲಯದ ಆವರಣದಲ್ಲಿ ಆಯೋಜಿಸಿದ್ದ 3ನೇ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ಗುರುವಾರ ಪದವಿ ಪ್ರದಾನ ಮಾಡಿ ಮಾತನಾಡಿದರು.

ಸಣ್ಣದೊಂದು ವೃತ್ತಿ ಆಯ್ಕೆಮಾಡಿಕೊಳ್ಳುವಾಗಲೂ ನೀವು ಸಕ್ರಿಯವಾಗಿ ಚಿಂತಿಸಿ. ಸೂಕ್ತ ನಿರ್ಧಾರ ತೆಗೆದುಕೊಳ್ಳಿ. ನಿಮ್ಮ ಮೊದಲ ವೃತ್ತಿ ಜೀವನ ನೀಡುವ ಖುಷಿಯೇ ಬೇರೆ ಆಗಿರುತ್ತದೆ ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ಇತ್ತೀಚೆಗಿನ ವರ್ಷಗಳಲ್ಲಿ ಉದ್ಯೋಗ ಹುಡುಕುವುದು ಕಷ್ಟದ ವಿಷಯ ಅಲ್ಲ. ಅವಕಾಶಗಳು ಸಾಕಷ್ಟಿವೆ. ವ್ಯಾಸಂಗದ ಸಮಯದಲ್ಲೇ ಯಾವ ಕ್ಷೇತ್ರದಲ್ಲಿ ವೃತ್ತಿ ಪ್ರಾರಂಭಿಸಬೇಕು ಎಂಬುವುದನ್ನು ಗುರುತಿಸಿಕೊಳ್ಳಬೇಕು. ಆ ಮೂಲಕ ನಿಮ್ಮ ವೃತ್ತಿ ಜೀವನ ಗುರಿ ತಲುಪಲು ಕಠಿಣ ಪರಿಶ್ರಮ ಪಡಬೇಕು ಎಂದರು.

**ಕ್ರಿಯಾಶೀಲರಾಗಬೇಕು:** ನಾವು ಮತ್ತೊಬ್ಬರನ್ನು ನೋಡಿ ಅವರಿಗೆ ಒಳ್ಳೆಯ ಉದ್ಯೋಗ ಸಿಕ್ಕಿದೆ. ಅವನು ಅದೃಷ್ಟಶಾಲಿ ಎಂದು ಭಾವಿಸಿಕೊಳ್ಳುತ್ತೇವೆ. ಆದರೆ, ಅವರು ಪಟ್ಟ ಪರಿಶ್ರಮ ಪರಿಣಾಮ ಅವರು ಉನ್ನತ ಸ್ಥಾನ ಗಿಟ್ಟಿಸಿಕೊಂಡಿರುತ್ತಾರೆ ಎಂಬ ಬಗ್ಗೆ ಯಾರು ಯೋಚಿಸುವುದಿಲ್ಲ ಎಂದು ಕ್ರಿಯಾಶೀಲತೆ ಬಗ್ಗೆ ತಿಳಿಸಿದರು.

ಪದವಿ ಮತ್ತು ಸ್ನಾತಕೋತ್ತರ ಪದವಿ, ಪಿಎಚ್‌ಡಿ ಪಡೆದುಕೊಂಡಿರುವ 2281 ವಿದ್ಯಾರ್ಥಿಗಳಿಗೆ ಪದವಿ ಪತ್ರ ನೀಡಿ ಅಭಿನಂದಿಸಲಾಯಿತು. ಜೈನ್ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಸಿ.ಜಿ. ಕೃಷ್ಣದಾಸ್ ನಾಯರ್, ಅಧ್ಯಕ್ಷ ಡಾ.ಚೆನ್ನರಾಜ್ ರಾಯ್ ಚಂದ್, ವಿವಿ ಕುಲಪತಿ ಡಾ.ಎನ್. ಸುಂದರ ರಾಜನ್, ಕುಲಸಚಿವ ಪ್ರೊ.ಎನ್.ವಿ.ಎಚ್. ಕೃಷ್ಣನ್ ಭಾಗವಹಿಸಿದ್ದರು.



ಜೈನ್ ವಿಶ್ವವಿದ್ಯಾಲಯದ 3ನೇ ಘಟಿಕೋತ್ಸವ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಯುಐಡಿಎಐ ಅಧ್ಯಕ್ಷ ನಂದನ್ ನಿಲೇಕಣಿ, ವಿವಿ ಅಧ್ಯಕ್ಷ ಡಾ.ಚೆನ್‌ರಾಜ್ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿದರು.

- ಅವಕಾಶಗಳು ಈಗ ಸಾಕಷ್ಟಿರುವ ಕಾರಣ ಕೆಲಸ ಹುಡುಕುವುದು ಕಷ್ಟವಲ್ಲ
- ವ್ಯಾಸಂಗದ ಸಮಯದಲ್ಲೇ ವೃತ್ತಿ ಕ್ಷೇತ್ರ ಆಯ್ಕೆ ಮಾಡಿಕೊಳ್ಳುವಂತೆ ಸಲಹೆ

> ನಾನು ಶಾಲಾ ದಿನಗಳಿಂದಲೂ ಪೈಲಟ್ ಆಗಬೇಕೆಂದು ತುಂಬಾ ಆಸೆ ಇತ್ತು. ಇದರಿಂದಾಗಿ ನಾನು ಸ್ನಾತಕೋತ್ತರ ವಿಷಯದಲ್ಲಿ ವಿಮಾನದ ಬಗ್ಗೆ ಹೆಚ್ಚಿನ ಅಧ್ಯಯನ ನಡೆಸಿದೆ. ಸದ್ಯಕ್ಕೆ ಉದ್ಯೋಗ ಹುಡುಕುತ್ತಿದ್ದೇನೆ. ಸಿಕ್ಕ ತಕ್ಷಣ ಸೂಕ್ಷ್ಮ ವಾಯು ವಾಹನ ತಯಾರಿಸುತ್ತೇನೆ.
>
> ■ ಶ್ರೀನಿಧಿ, ಎಂಟೆಕ್,
> ಎರಡು ಚಿನ್ನದ ಪದಕ ಪಡೆದವರು